## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಸರ್ಕಾರಿ ಪ್ರಾಥಮಿಕ ಶಾಲೆಯ 1 ರಿಂದ 5 ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಉಪಹಾರಕ್ಕೆ ಬಿಸಿಯೂಟ ನೀಡುವ "ಅಕ್ಷರ ದಾಸೋಹ" ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ.

ಓದಲಾಗಿದೆ:- 1. ಸರ್ಕಾರದ ಆದೇಶ ಸಂಖ್ಯೆ:ಇಡಿ:20:ಎಂ.ಎಂ.ಎಸ್ 2000(ಭಾಗ):ದಿ.1.10.2001

2. ಸಹ ನಿರ್ದೇಶಕರು(ಎಂ.ಡಿ.ಎಂ.) ಸಾ.ಶಿ.ಇ ಇವರ ಪತ್ರ, ಸಂಖ್ಯೆ:ಎಂ.1:ಎಂ.ಎಂ.ಎಸ್ ಪಿ.ಪಿ.ಯೋ.5:2003-2004:ದಿ.25.4.2003.

3. ಆಯುಕ್ತರು, ಸಾ.ಶಿ.ಇ ಇವರ ಪತ್ರ, ಸಂಖ್ಯೆ:ಯೋ(1):ಎಂ.ಎಂ.ಎಸ್:ಮು.ಪು:53:2002-03 ದಿನಾಂಕ:11.3.2003.

4. ಸರ್ಕಾರದ ಆದೇಶ ಸಂಖ್ಯೆ:ಇಡಿ:21:ಎಂ.ಎಂ.ಎಸ್ 2001:ದಿ.29.12.2001

*****

ಪ್ರಸ್ತಾವನೆ:-

ರಾಜ್ಯದ ಈಶಾನ್ಯ ವಲಯದ ಅತೀ ಹಿಂದುಳಿದ ಏಳು ಜಿಲ್ಲೆಗಳಾದ ಗುಲ್ಬರ್ಗಾ, ಬೀದರ್, ರಾಯಚೂರು, ಕೊಪ್ಪಳ, ಬಿಜಾಪುರ, ಬಾಗಲಕೋಟೆ ಮತ್ತು ಬಳ್ಳಾರಿಗಳಲ್ಲಿ ಕೇಂದ್ರ ಸರ್ಕಾರವು ಪ್ರಾಥಮಿಕ ಶಿಕ್ಷಣಕ್ಕೆ ಪೌಷ್ಠಿಕ ನೆರವು ನೀಡುವ ರಾಷ್ಟ್ರೀಯ ಕಾರ್ಯಕ್ರಮದ ಯೋಜನೆಯಡಿ ಒಂದರಿಂದ ಐದನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಶಾಲಾ ಮಕ್ಕಳಿಗೆ ಪ್ರತಿ ತಿಂಗಳೂ ಪ್ರತಿ ಮಗುವಿಗೆ ನೀಡುತ್ತಿರುವ ಮೂರು ಕೆ.ಜಿ.ಅಕ್ಕಿ/ಗೋಧಿಯನ್ನು ಬಳಸಿಕೊಂಡು ಬಿಸಿ ಊಟ ನೀಡುವ ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಕ್ರಮವನ್ನು ಓದಲಾದ(1)ರ ಆದೇಶದಲ್ಲಿ 2001-02ನೇ ಸಾಲಿನಿಂದ ಜಾರಿಗೊಳಿಸಲಾಗಿದೆ. ಈ ಯೋಜನೆಯನ್ನು ಜಾರಿಗೊಳಿಸಿದ ನಂತರ ಶಾಲೆಗೆ ಬರುವ ಮಕ್ಕಳ ಸಂಖ್ಯೆಯಲ್ಲಿ ಗಣನೀಯವಾಗಿ ಹೆಚ್ಚಳವಾಗಿರುವುದನ್ನು ಮತ್ತು ಶಾಲೆ ಬಿಡುವವರ ಮಕ್ಕಳ ಸಂಖ್ಯೆ ಗಣನೀಯವಾಗಿ ತಗ್ಗಿರುವುದನ್ನು ಮನಗಂಡ ಸರ್ಕಾರವು ರಾಜ್ಯದ ಸಾಕ್ಷರತಾ ಮಟ್ಟವನ್ನು ಇನ್ನಷ್ಟು ಉನ್ನತ ಪಡಿಸುವ ಸಲುವಾಗಿ 2003-04ನೇ ಸಾಲಿನ ಆಯವ್ಯಯವನ್ನು ಮಂಡಿಸುವಾಗ ಸನ್ಮಾನ್ಯ ಮುಖ್ಯಮಂತ್ರಿಗಳು "ಅಕ್ಷರ ದಾಸೋಹ" ಎನ್ನುವ ನೂತನ ಕಾರ್ಯಕ್ರಮವನ್ನು ಉಳಿದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸುವುದಾಗಿ ಘೋಷಿಸಿರುತ್ತಾರೆ.

ಇದರನ್ವಯ ಓದಲಾದ (2) ಹಾಗೂ (3)ರ ಪತ್ರಗಳಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆರವರು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮುಂದುವರೆದಂತೆ ಓದಲಾದ (4)ರ ಆದೇಶದಲ್ಲಿ ಈ ಕಾರ್ಯಕ್ರಮದಡಿ ಆಹಾರ ಪದಾರ್ಥಗಳಾದ ಖಾದ್ಯ ತೈಲ ಐಯೋಡೈಸ್ಡ್ ಉಪ್ಪು, ಬೇಳೆ ಇತ್ಯಾದಿಗಳನ್ನು ಸರಬರಾಜು ಮಾಡಲು ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ, ಬೆಂಗಳೂರು ಇವರನ್ನು ಪ್ರತಿನಿಧಿಯಾಗಿ(ಏಜೆನ್ಸಿ) ನೇಮಿಸಿದ್ದು, 2003-04ನೇ ಸಾಲಿಗೆ ಉಳಿದ ಜಿಲ್ಲೆಗಳಿಗೂ ಇವರನ್ನೆ ಪ್ರತಿನಿಧಿಯಾಗಿ(ಏಜೆನ್ಸಿ) ನೇಮಿಸಲು ಸರ್ಕಾರವು ತೀರ್ಮಾನಿಸಿದೆ. ಮೇಲಿನ ಹಾಗೂ ಇತರೇ ಎಲ್ಲಾ ಅಂಶಗಳನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ : 24 : ಎಂ.ಎಂ.ಎಸ್ 2003 ಬೆಂಗಳೂರು, ದಿನಾಂಕ: 05.06.2003

[ಇಡಿ:97:ವೆಚ್ಚ(ಮಾನಿಟ್)2003:ದಿ.05.06.2003]

ರಾಜ್ಯದ ಈಶಾನ್ಯ ವಲಯದ ಏಳು ಜಿಲ್ಲೆಗಳಲ್ಲಿ ಜಾರಿಯಲ್ಲಿರುವ "ಮಧ್ಯಾಹ್ನ ಉಪಹಾರ" ಯೋಜನೆಯಡಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಒಂದರಿಂದ ಐದನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಶಾಲಾ ಮಕ್ಕಳಿಗೆ ನೀಡಲಾಗುತ್ತಿರುವ ಮಧ್ಯಾಹ್ನ ಬಿಸಿಯೂಟ ಯೋಜನೆಯ ಮಾದರಿಯಲ್ಲಿ ರಾಜ್ಯದ ಉಳಿದ 20 ಜಿಲ್ಲೆಗಳಿಗೂ 2003-04ನೇ ಸಾಲಿನಿಂದ ಈ ಯೋಜನೆಯನ್ನು ವಿಸ್ತರಿಸಲು ಮಂಜೂರಾತಿ ನೀಡಿದೆ. ಈ ಕಾರ್ಯಕ್ರಮಕ್ಕೆ "ಅಕ್ಷರ ದಾಸೋಹ" ಎಂದು ನಾಮಕರಣ ಮಾಡಿದೆ. ಈ ಕಾರ್ಯಕ್ರಮವು ಒಂದನೇ ಜುಲೈ 2003 ರಿಂದ ಆರಂಭಿಸತಕ್ಕದ್ದು.

2. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಕೆಳಕಂಡ ವಿವಿಧ ವರ್ಗಗಳ 308 ಹುದ್ದೆಗಳನ್ನು ಸೃಜಿಸಲಾಗಿದೆ. ಹಾಗೂ ಈ ಹುದ್ದೆಗಳನ್ನು ಹಾಲಿ ಜಾರಿಯಲ್ಲಿರುವ ನಿಯಮಗಳನ್ವಯ ಅಭಿಯೋಜನೆ(Redeployment ಮೂಲಕ ಭರ್ತಿ ಮಾಡಲು ಮಂಜೂರಾತಿ ನೀಡಿದೆ.

| ಕ್ರಮ ಸಂಖ್ಯೆ | ಹುದ್ದೆಗಳ ವಿವರ | ವೇತನ ಶ್ರೇಣಿ | ಮಂಜೂರಾದ ಹುದ್ದೆಗಳ ಸಂಖ್ಯೆ |
|---|---|---|---|
| 01. | ಶಿಕ್ಷಣಾಧಿಕಾರಿಗಳು [ಅಕ್ಷರ ದಾಸೋಹ] | ರೂ.7400-13,120 | 20ಹುದ್ದೆಗಳು[ಪ್ರತಿ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಒಂದರಂತೆ]. |
| 02. | ಸಹಾಯಕ ನಿರ್ದೇಶಕರು [ಅಕ್ಷರ ದಾಸೋಹ] | ರೂ.6000-11,200 | 134ಹುದ್ದೆಗಳು[ಪ್ರತಿ ತಾಲ್ಲೂಕು ಕಛೇರಿಗೆ ಒಂದರಂತೆ] |
| 03. | ಪ್ರಥಮ ದರ್ಜೆ ಸಹಾಯಕರು | ರೂ.3850-7050 | 154ಹುದ್ದೆಗಳು[ಪ್ರತಿ ಜಿಲ್ಲಾಧಿಕಾರಿಗಳ ಕಛೇರಿಗೆ 1 ಹುದ್ದೆಯಂತೆ, 20 ಹುದ್ದೆಗಳು, ಪ್ರತಿ ತಾಲ್ಲೂಕು ಕಛೇರಿಗೆ 1 ಹುದ್ದೆಯಂತೆ 134 ಹುದ್ದೆಗಳು] |

3.ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಮೊದಲನೆಯ ಕಂತಾಗಿ ಒಟ್ಟು ರೂ.3000.00ಲಕ್ಷಗಳನ್ನು [ರೂ.ಮೂರುಸಾವಿರಲಕ್ಷಗಳುಮಾತ್ರ] ಈ ಕೆಳಕಂಡಂತೆ ಜಿಲ್ಲಾಧಿಕಾರಿಗಳಿಗೆ ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಜಿಲ್ಲೆಗಳಿಗೆ ಬಿಡುಗಡೆ ಮಾಡಿರುವ ಮೊತ್ತ[ರೂ.ಲಕ್ಷಗಳಲ್ಲಿ] |
|---|---|---|
| 01. | ಬೆಂಗಳೂರು ನಗರ | 150.00 |
| 02. | ಬೆಂಗಳೂರುಗ್ರಾಮಾಂತರ | 150.00 |
| 03. | ಬೆಳಗಾಂ | 150.00 |
| 04. | ಚಿಕ್ಕಮಗಳೂರು | 150.00 |
| 05. | ಚಿತ್ರದುರ್ಗ | 150.00 |
| 06. | ದಕ್ಷಿಣ ಕನ್ನಡ | 150.00 |
| 07. | ಧಾರವಾಡ | 150.00 |
| 08. | ಹಾಸನ | 150.00 |
| 09. | ಕೊಡಗು | 150.00 |
| 10. | ಕೋಲಾರ | 150.00 |
| 11. | ಮಂಡ್ಯ | 150.00 |
| 12. | ಮೈಸೂರು | 150.00 |
| 13. | ಶಿವಮೊಗ್ಗ | 150.00 |
| 14. | ತುಮಕೂರು | 150.00 |
| 15. | ಉತ್ತರಕನ್ನಡ | 150.00 |
| 16. | ಚಾಮರಾಜನಗರ | 150.00 |
| 17. | ದಾವಣಗೆರೆ | 150.00 |
| 18. | ಹಾವೇರಿ | 150.00 |
| 19. | ಉಡುಪಿ | 150.00 |
| 20. | ಗದಗ | 150.00 |
| | ಒಟ್ಟು | 3000.00 |

ಈ ಕಾರ್ಯಕ್ರಮಕ್ಕಾಗಿ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2202-01-800-1-35[ಯೋಜನೆ]ಅಡಿಯಲ್ಲಿ ಭರಿಸತಕ್ಕದ್ದು. ಮುಂದಿನ ಕಂತನ್ನು ಬಿಡುಗಡೆ ಮಾಡಲು ಜಿಲ್ಲಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖಾ

ಆಯುಕ್ತರ ಮುಖಾಂತರ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಅಗತ್ಯವಿರುವ ಹಣದ ಅವಶ್ಯಕತೆಯ ಬಗ್ಗೆ ವಿವರವಾದ ವರದಿಯನ್ನು ಘಟಕವಾರು ಮಾಹಿತಿಯೊಂದಿಗೆ ಸಲ್ಲಿಸತಕ್ಕದ್ದು.

4. ಈ ಕಾರ್ಯಕ್ರಮದ ಸಮರ್ಪಕ ಅನುಷ್ಠಾನಕ್ಕಾಗಿ ಈ ಹಿಂದೆ ತಿಳಿಸಿರುವ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಮಾರ್ಗ ಸೂಚಿಗಳನ್ನು ಪಾಲಿಸತಕ್ಕದ್ದು. ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಗೆ ಅವಶ್ಯಕತೆಗನುಗುಣವಾಗಿ ಸ್ಪಷ್ಟೀಕರಣ ಹಾಗೂ ಮಾರ್ಗ ಸೂಚಿಗಳನ್ನು ನೀಡುವ ಅಧಿಕಾರವನ್ನು ನೀಡಿದೆ.

5. ಸ್ತ್ರೀಶಕ್ತಿ ಗುಂಪುಗಳು/ಸಮರ್ಥ ಸರ್ಕಾರೇತರ ಸಂಸ್ಥೆಗಳಿಗೆ ಎಲ್ಲೆಲ್ಲಿ ಅವರು ಮುಂದೆ ಬರುತ್ತಾರೋ ಅಲ್ಲಿ ಆ ಸಂಸ್ಥೆಗಳನ್ನು ಆಯ್ಕೆಮಾಡಿಕೊಳ್ಳುವ ಅಧಿಕಾರವನ್ನು ಮತ್ತು ಅವರಿಗೆ ಈ ಕಾರ್ಯಕ್ರಮದ ನಿರ್ವಹಣೆಯನ್ನು ವಹಿಸಲು ಹಾಗೂ ಅವರ ಸೇವೆಯನ್ನು ಬಳಸಿಕೊಳ್ಳುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಿದೆ. ಹೀಗೆ ಇವುಗಳನ್ನು ಆಯ್ಕೆ ಮಾಡುವಾಗ ತಾಲ್ಲೂಕನ್ನು ಘಟಕವನ್ನಾಗಿ ಇರಿಸಿಕೊಳ್ಳತಕ್ಕದ್ದು. ಈ ರೀತಿ ಜಿಲ್ಲಾಧಿಕಾರಿಗಳು ಆಯ್ಕೆ ಮಾಡಿದ ಸಂಸ್ಥೆಗಳಿಗೆ ಅಂಗೀಕೃತ ಅಡುಗೆ ತಯಾರಿಸುವ ವೆಚ್ಚಗಳನ್ನು ಸಹ ನೀಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಿದೆ. ಇಲ್ಲದಿದ್ದಲ್ಲಿ ಮಾರ್ಗಸೂಚಿಯಂತೆ ಪಂಚಾಯತ್ ಮೂಲಕ ಕಾರ್ಯಕ್ರಮ ನಿರ್ವಹಿಸಲು ಕ್ರಮ ಕೈಗೊಳ್ಳುವುದು.

6. ಈ ಯೋಜನೆಗೆ ಬೇಕಾಗುವ ಪದಾರ್ಥಗಳಾದ ಖಾದ್ಯ ತೈಲ ಐಯೋಡೈಸ್ಡ್ ಉಪ್ಪು, ಬೇಳೆ ಇತ್ಯಾದಿಗಳನ್ನು ಸರಬರಾಜು ಮಾಡಲು ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ, ಬೆಂಗಳೂರು ಇವರನ್ನು ಪ್ರತಿನಿಧಿಯಾಗಿ(ಏಜೆನ್ಸಿ)ನೇಮಿಸಿದೆ. ಈ ಯೋಜನೆಯಡಿ ಖಾದ್ಯ ತೈಲ ಐಯೋಡೈಸ್ಡ್ ಉಪ್ಪು, ಬೇಳೆ ಇತ್ಯಾದಿಗಳನ್ನು ತಾಲ್ಲೂಕು ಮಟ್ಟದವರೆಗೆ ಸರಬರಾಜು ಮಾಡುವ ಜವಾಬ್ದಾರಿಯು ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ್ದೇ ಆಗಿರುತ್ತದೆ. ಈ ಯೋಜನೆಯು ವ್ಯತ್ಯಯವಾಗದಂತೆ ಉತ್ತಮ ಗುಣಮಟ್ಟದ ಆಹಾರ ಪದಾರ್ಥಗಳನ್ನು ಕಾಲ ಕಾಲಕ್ಕೆ ಸರಬರಾಜು ಮಾಡುವ ಜವಾಬ್ದಾರಿಯು ಕೂಡಾ ನಿಗಮದ್ದೇ ಆಗಿರುತ್ತದೆ. ಈ ಪದಾರ್ಥಗಳನ್ನು ನಿಗಮದಿಂದ ಖರೀದಿಸಲು ಸದರಿ ನಿಗಮಕ್ಕೆ ಒಂದು ತಿಂಗಳ ಹಣ ಬೇಡಿಕೆಯನ್ನು ಮುಂಗಡವಾಗಿ ಬಿಡುಗಡೆ ಮಾಡಲು ಮತ್ತು ಅವರ ಮುಂದಿನ ಪಾವತಿಗಳನ್ನು ಅವರು ಸಲ್ಲಿಸುವ ಬಿಲ್ಲುಗಳಿಗೆ ಅನುಗುಣವಾಗಿ ಮುಂಗಡ ನೀಡಿದ ಹಣಕ್ಕೆ ಸರಿದೂಗಿಸಿಕೊಳ್ಳದೆ ಪಾವತಿಸಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಿದೆ.

7. ಈ ಯೋಜನೆಯಡಿ ಖರೀದಿಸಬೇಕಾದ ವಸ್ತುಗಳು/ಪದಾರ್ಥಗಳನ್ನು ಖರೀದಿಸುವಲ್ಲಿ ಪ್ರಚಲಿತ ಜಾರಿಯಲ್ಲಿರುವ ಎಲ್ಲಾ ಖರೀದಿ ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯು ತನ್ನ ಅ.ಟಿ.ಸಂಖ್ಯೆ:ಯೋ.ಇ:69:ಜಶ:2003:ದಿನಾಂಕ:7.5.2003 ಹಾಗೂ ಆರ್ಥಿಕ ಇಲಾಖೆಯ ಅ.ಟಿ.ಸಂಖ್ಯೆ:ಆ.ಇ:525:ವೆಚ್ಚ-3:2003:ದಿ.16.5.2003ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಹಾಗೂ ಅವರ ಹೆಸರಿನಲ್ಲಿ

(ಕೆ.ತ್ರಿಕಂಠೇಶ್ವರ)

ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ(ಯೋಜನೆ)
ಶಿಕ್ಷಣ ಇಲಾಖೆ.

ಗೆ:-

1. ಮಹಾಲೇಖಪಾಲರು, ಕರ್ನಾಟಕ (ಆಡಿಟ್ 1 ಮತ್ತು 2), ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು(ಪ್ರಾಥಮಿಕ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ,
5. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.
6. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು./ಮುಖ್ಯ ಯೋಜನಾಧಿಕಾರಿಗಳು.
7. ಎಲ್ಲಾ ಜಿಲ್ಲೆಯ ಜಿಲ್ಲಾ ಖಜಾನಾಧಿಕಾರಿಗಳು.
8. ಎಲ್ಲಾ ಜಿಲ್ಲೆಯ ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
9. ನಿರ್ದೇಶಕರು, ಜನಶಕ್ತಿ, ಮತ್ತು ಉದ್ಯೋಗ ವಿಭಾಗ, ಯೋಜನಾ ಇಲಾಖೆ, ಬೆಂಗಳೂರು.
10. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
11. ಉಪಕಾರ್ಯದರ್ಶಿಗಳು, ಸಚಿವ ಸಂಪುಟ ವ್ಯವಹಾರಗಳ ಇಲಾಖೆ, ವಿಧಾನ ಸೌಧ, ಬೆಂಗಳೂರು.